ಅನುಕೂಲತೆಗಳು ಇದ್ದಾಗ, ಈ ಇಲಾಖೆಯ ವತಿಯಿಂದ ಹೆಚ್ಚಿನ ಸಂಖ್ಯೆಗಳಲ್ಲಿ ಕಟ್ಟಡಗಳನ್ನು ಕಟ್ಟಿದರೆ ಚಿಕ್ಕ ಮಕ್ಕಳಿಗೆ ಭದ್ರತೆಯನ್ನು ಒದಗಿಸಿದ ಹಾಗೆ ಆಗುತ್ತದೆ. ಈ ಗುಡಿಸಲುಗಳಲ್ಲಿ ಒಬ್ಬ ಸಹಾಯಕಿ ಇರುವುದರಿಂದ ಏನಾದರೂ ಬೆಂಕಿ ಅನಾಹುತವಾದರೆ ಆ ಮಕ್ಕಳನ್ನು ಹೊರಗೆ ಕರೆದುಕೊಂಡು ಬರುವ ವ್ಯವಸ್ಥೆ ಇರುವುದಿಲ್ಲ. ಆದುದರಿಂದ ಮುಂದಾಲೋಚನೆಯಿಂದ ವಿಚಾರ ಮಾಡಿ ಹೆಚ್ಚಿನ ಸಂಖ್ಯೆಯಲ್ಲಿ ಅಂಗನವಾಡಿ ಕಟ್ಟಡಗಳಿಗೆ ಅವಕಾಶ ಮಾಡಿಕೊಡಬೇಕೆಂಬ ಮಾತನ್ನು ತಮ್ಮ ಮುಖಾಂತರ ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ.

ಶ್ರೀ ಪಿ.ಎಂ. ನರೇಂದ್ರಸ್ವಾಮಿ:– ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಸೃಷ್ಟೀಕರಣವನ್ನು ನೀಡಿದ್ದೇನೆ. ಆದರೂ ಗೌರವಾನ್ವಿತ ಸದಸ್ಯರು ಹೇಳಿರುವ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು, ಅದರ ಬಗ್ಗೆ ತುರ್ತಾಗಿ ಕ್ರಮವನ್ನು ಕೈಗೊಳ್ಳುತ್ತೇನೆ.

ಮುದ್ದೇಬಿಹಾಳ ಕ್ಷೇತ್ರ ವ್ಯಾಪ್ತಿಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪನೆ ಮಾಡುವ ಬಗ್ಗೆ

128 (979) ಶ್ರೀ ಅಪ್ಪಾಜಿ ಚನ್ನಬಸವರಾಜ್ ಶಂಕರರಾವ್ ನಾಡಗೌಡ (ಮುದ್ದೇಬಿಹಾಳ):– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಬಿಜಾಪುರ ಜಿಲ್ಲೆ, ಮುದ್ದೇಬಿಹಾಳ ತಾಲ್ಲೂಕಿನಲ್ಲಿ ಹೊಸದಾಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸಲು ಸರ್ಕಾರ ಉದ್ದೇಶಿಸಿದೆಯೇ;

ಆ) ಹಾಗಿದ್ದಲ್ಲಿ, ಯಾವ ಯಾವ ಸ್ಥಳಗಳಲ್ಲಿ ಪ್ರಾರಂಭಿಸಲು ಉದ್ದೇಶ ಹೊಂದಲಾಗಿದೆ;

ಇ) ಬಿಜಾಪುರ ಜಿಲ್ಲೆಯಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳೆಷ್ಟು; (ತಾಲ್ಲೂಕುವಾರು ವಿವರ ನೀಡುವುದು)?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು:–

ಅ) ಇಲ್ಲ.

2001ರ ಜನಗಣತಿ ಪ್ರಕಾರ, ಮುದ್ದೇಬಿಹಾಳ ತಾಲ್ಲೂಕಿನ ಗ್ರಾಮೀಣ ಜನಸಂಖ್ಯೆಯು 1,99,202 ಇದ್ದು, ಮಾರ್ಗ ಸೂಚಿಗಳ ಪ್ರಕಾರ 7 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಲು ಅವಕಾಶವಿದೆ. ಆದರೆ ಈಗಾಗಲೇ 12 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮಂಜೂರಾಗಿದ್ದು, ಅವುಗಳು ಕಾರ್ಯನಿರ್ವಹಿಸುತ್ತಿವೆ. ಆದ್ದರಿಂದ, ಸದರಿ ತಾಲ್ಲೂಕಿನಲ್ಲಿ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಲು ಅವಕಾಶವಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ವಿವರಗಳನ್ನು ಅನುಬಂಧ – 1 ರಲ್ಲಿ ಲಗತ್ತಿಸಿದೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 979 ಗೆ ಅನುಬಂಧ –1

ಬಿಜಾಪುರ ಜಿಲ್ಲೆಯ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು ಮತ್ತು ಸಿಬ್ಬಂದಿಗಳ ವಿವರಗಳು

ಕ್ರ. ಸಂ.	ತಾಲ್ಲೂಕಿನ ಹೆಸರು	ವೈದ್ಯರು			ಇತರೆ ಸಿಬ್ಬಂದಿ		
		ಮಂಜೂರಾದ	ಕಾರ್ಯನಿರತ	ಖಾಲಿ	ಮಂಜೂರಾದ	ಕಾರ್ಯನಿರತ	ಖಾಲಿ

		ಹುದ್ದೆ	ಹುದ್ದೆ		ಹುದ್ದೆ	ಹುದ್ದೆ	
1	ಬಸವನ ಬಾಗೇವಾಡಿ	15	13	2	212	167	45
2	ಬಿಜಾಪುರ	15	15	0	236	200	36
3	ಇಂಡಿ	12	11	1	211	150	61
4	ಮುದ್ದೇಬಿಹಾಳ	9	8	1	173	110	63
5	ಸಿಂದಗಿ	8	8	0	197	138	59
ಒಟ್ಟು		59	55	4	1029	765	264

ಶ್ರೀ ಅಪ್ಪಾಜಿ ಚನ್ನಬಸವರಾಜ್ ಶಂಕರರಾವ್ ನಾಡಗೌಡ: ಮಾನ್ಯ ಅಧ್ಯಕ್ಷರೆ, ಸರ್ಕಾರ ಉತ್ತರವನ್ನು ಒದಗಿಸಿದೆ. ಈ ಉತ್ತರದಲ್ಲಿ ಲಗತ್ತಿಸಿರುವಂಥ ಮಾಹಿತಿಯನ್ನು ನೋಡಿದಾಗ, ಬಿಜಾಪುರ ಜಿಲ್ಲೆಯಲ್ಲಿ ಖಾಲಿ ಇರುವಂಥ ಹುದ್ದೆಗಳನ್ನು ಲೆಕ್ಕ ಹಾಕಿಕೊಂಡಾಗ 1029 ಹುದ್ದೆಗಳು ಇದ್ದರೆ, ಅದರಲ್ಲಿ 264 ಹುದ್ದೆಗಳು ಖಾಲಿ ಇದೆಯೆಂದು ಉತ್ತರ ಕೊಟ್ಟಿದ್ದಾರೆ. ಅದರಲ್ಲೂ ವಿಶೇಷವಾಗಿ ಮುದ್ದೇಬಿಹಾಳ ತಾಲ್ಲೂಕಿನಲ್ಲಿ ಈಗಾಗಲೇ 63 ಹುದ್ದೆಗಳು ಖಾಲಿ ಇವೆಯೆಂದು ಹೇಳುತ್ತಾರೆ. ಇದು ಅಲ್ಲದೇ ಈ ಮಾಹಿತಿ ಸರಿ ಇಲ್ಲ, ಏಕೆಂದರೆ ಅಲ್ಲಿ ಕೆಲಸ ಮಾಡುವಂಥವರನ್ನು ಈಗಾಗಲೇ ನಿಯೋಜನೆಯ ಮೇಲೆ ಬೇರೆ ಕಡೆಗೆ ನೀವು ಹಾಕಿದ್ದೀರಿ. ಎಲ್ಲಾ ಆಸ್ಪತ್ರೆಗಳಲ್ಲಿ 108 ಆ್ಯಂಬುಲೆನ್ಸ್ ಸರ್ವೀಸ್ ಪ್ರಾರಂಭವಾಗಿದೆ. ಈ ಆ್ಯಂಬುಲೆನ್ಸ್‌ನಲ್ಲಿ ರೋಗಿಗಳನ್ನು ಆಸ್ಪತ್ರೆಗೆ ಕರೆದುಕೊಂಡು ಬಂದರೆ ಆ ರೋಗಿಗಳನ್ನು ನೋಡಿಕೊಳ್ಳುವುದಕ್ಕೆ ಸಿಬ್ಬಂದಿಗಳಿಲ್ಲ. ಅವರನ್ನು ಬಿಜಾಪುರದ ಆಸ್ಪತ್ರೆಗೆ ಕಳುಹಿಸಿಕೊಡುತ್ತಾರೆ. ನಮ್ಮಲ್ಲಿ ಇವರಿಗೆ ಚಿಕಿತ್ಸೆಯನ್ನು ಕೊಡುವುದಕ್ಕೆ ಆಗುವುದಿಲ್ಲ. ಬಿಜಾಪುರಕ್ಕೆ ಕೆರೆದುಕೊಂಡು ಹೋಗಿ ಎನ್ನುವ ಪ್ರಸಂಗಗಳು ಆಗಿವೆ. ಎಷ್ಟೋ ರೋಗಿಗಳು ಸತ್ತು ಹೋಗಿದ್ದಾರೆ. ಅದಕ್ಕೆ ನಾನು ಕೇಳುವಂಥ ಪ್ರಶ್ನೆ ಈ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವುದಕ್ಕೆ

ಏನು ಕ್ರಮ ತೆಗೆದುಕೊಳ್ಳುತ್ತೀರಿ? ಈಗ ಹೊಸ trend ಪ್ರಾರಂಭವಾಗಿದೆ. ಗ್ರಾಮೀಣ ಪ್ರದೇಶಗಳಿಗೆ ಯಾರೂ ಹೋಗಿ ಕೆಲಸ ಮಾಡುವುದಕ್ಕೆ ತಯಾರಿಲ್ಲ. ಯಾವ ವೈದ್ಯರುಗಳು ತಯಾರಿಲ್ಲ. ನರ್ಸ್‌ಗಳು ತಯಾರಿಲ್ಲ. ಅಲ್ಲಿ ಯಾವ facilities ಇದ್ದರೂ ಹೋಗುವುದಕ್ಕೆ ತಯಾರಿಲ್ಲ. ಅದಕ್ಕೆ ನಾನು ತಮ್ಮ ಮೂಲಕ ಮಾನ್ಯ ಮಂತ್ರಿಯವರನ್ನು ಕೇಳುವಂಥದ್ದು ಏನೆಂದರೆ, ಸರ್ಕಾರದಿಂದ ಪ್ರಯೋಜನವಾಗುತ್ತಿಲ್ಲ, ಇದನ್ನು ಒಂದು ಸಂಸ್ಥೆ ನಡೆಸಲು ಮುಂದೆ ಬಂದರೆ, ಅದನ್ನು ಯಾರಾದರೂ NGO ಗಳು ನಡೆಸಲು ಮುಂದೆ ಬಂದರೆ, ಅಥವಾ ಯಾರಾದರೂ ವೈದ್ಯರುಗಳು ಮುಂದೆ ಬಂದರೆ ಆ ಆಸ್ಪತ್ರೆಯನ್ನು ಅವರು ನಡೆಸಿಕೊಂಡು ಹೋಗುವುದಕ್ಕೆ ಸರ್ಕಾರ ಅವರಿಗೆ ವಹಿಸಿಕೊಡುತ್ತದೆಯೇ ಎಂಬ ಪ್ರಶ್ನೆ ಮೂಲಭೂತವಾಗಿ ಇದೆ.

ಶ್ರೀ ಬಿ. ಶ್ರೀರಾಮುಲು: ಮಾನ್ಯ ಅಪ್ಪಾಜಿ ನಾಡಗೌಡರು ಏನು ಪ್ರಶ್ನೆಯನ್ನು ಪ್ರಸ್ತಾಪ ಮಾಡಿದ್ದಾರೆ. ಇವತ್ತು ಹಳ್ಳಿಗಳ ಕಡೆಗೆ ಡಾಕ್ಟರ್‌ಗಳು ಹೋಗುತ್ತಿಲ್ಲವೆಂದು ಏನು ಹೇಳಿದ್ದಾರೆ. ಇತ್ತೀಚೆಗೆ ಹೊಸದಾಗಿ ಏನು ನೇಮಕಾತಿ ಮಾಡುತ್ತಿದ್ದೇವೆ, ಈ ನೇಮಕಾತಿಯಲ್ಲಿ M.B.B.S. Doctor ಗಳನ್ನು ಸುಮಾರು 1,300 ಡಾಕ್ಟರ್‌ಗಳನ್ನು ಕಡ್ಡಾಯವಾಗಿ ಗ್ರಾಮೀಣ ಭಾಗದಲ್ಲಿ ಸೇವೆ ಸಲ್ಲಿಸಬೇಕೆಂದು Clause ಅನ್ನು ಹಾಕಿ ಅವರನ್ನು ವೈದ್ಯರನ್ನಾಗಿ ನೇಮಕಾತಿ ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು ಹೇಳಿದಂತೆ ಇವತ್ತು ಗ್ರಾಮೀಣ ಭಾಗದಲ್ಲಿರುವಂಥ ಜನರಿಗೆ ಬಹಳಷ್ಟು ಕಷ್ಟವಾಗುತ್ತಿದೆ, ಕಾರಣವೇನೆಂದರೆ ಬಹಳಷ್ಟು ವೈದ್ಯರುಗಳು ಮತ್ತು ಸಿಬ್ಬಂದಿಗಳು ಬಿಜಾಪುರಕ್ಕೆ ಹೋಗುವುದು, ಇವರು ಪಟ್ಟಣಗಳಲ್ಲಿ ಕೆಲಸ ಮಾಡುವುದಕ್ಕೆ ಬರುತ್ತಾರೆ. ಇವರು ಮುದ್ದೇಬಿಹಾಳದಲ್ಲಿ ಕೆಲಸ ಮಾಡಲು ಒಪ್ಪುವುದಿಲ್ಲ. ಅದಕ್ಕೋಸ್ಕರ ಈ ವಿಷಯವಾಗಿ ನಾನು ಮಾನ್ಯ ಸದಸ್ಯರ ಬಳಿ ಮಾತನಾಡುತ್ತೇನೆ. ಇವತ್ತು ಸಿಬ್ಬಂದಿಗಳ ಕೊರತೆ ಏನು ಇದೆ, ಅದನ್ನು ಸರಿಪಡಿಸಿ ಕೊಡುತ್ತೇನೆ.

ಇದರ ಜೊತೆಗೆ ಈ ರಾಜ್ಯದಲ್ಲಿ ಹೊಸದಾಗಿ ನೇಮಕವಾಗುವ ಡಾಕ್ಟರ್‌ಗಳು ಕಡ್ಡಾಯವಾಗಿ ಗ್ರಾಮೀಣ ಮಟ್ಟದಲ್ಲಿ ಅವರು ಒಂದು ವರ್ಷ ಕೆಲಸ ಮಾಡಬೇಕೆಂದು Clause ಅನ್ನು ಹಾಕಿ ನೇಮಕಾತಿಯನ್ನು ಮಾಡಿಕೊಳ್ಳುತ್ತಿದ್ದೇವೆ.

ಶ್ರೀ ಅಪ್ಪಾಜಿ ಚನ್ನಬಸವರಾಜ್ ಶಂಕರರಾವ್ ನಾಡಗೌಡ: ಮಾನ್ಯ ಅಧ್ಯಕ್ಷರೆ, ಈ Clause ಏನೂ ಹೊಸದಲ್ಲ, ಮೊದಲೇ ಇದೆ. ಇದು ಇದ್ದಾಗ್ಯೂ ಕೂಡ ಅವರು ಅಲ್ಲಿಗೆ ಕೆಲಸಕ್ಕೆ ಬರುವುದಿಲ್ಲ. ನೀವು ಎಲ್ಲಿಯವರೆಗೂ ಅವರನ್ನು ನೌಕರಿಗೆ select ಮಾಡುತ್ತೀರಿ, ಅಲ್ಲಿಯವರೆಗೂ ಅಲ್ಲಿ ಇರುತ್ತಾರೆ. Report ಮಾಡಿಕೊಂಡ 15 ದಿವಸಗಳ ನಂತರ long leave ಹಾಕಿಕೊಂಡು ಹೋಗುತ್ತಾರೆ. ಇದು ನಡೆಯುತ್ತಿರುವಂಥ ಪ್ರಕ್ರಿಯೆ, ಅದನ್ನು ನಾವು ನೋಡುತ್ತಿದ್ದೇವೆ. ಗ್ರಾಮೀಣ ಮಟ್ಟದಲ್ಲಿ health for all ಎಂದು ಹೇಳುತ್ತಿದ್ದೇವೆ. 2010ರಲ್ಲಿ ಸಂಪೂರ್ಣ ಆರೋಗ್ಯವೆಂದು ನಾವು mission ನಲ್ಲಿ ಹೇಳಿಕೊಂಡು ಬರುತ್ತಿದ್ದೇವೆ. ಅದಕ್ಕೆ ಎಲ್ಲಿ ಸರ್ಕಾರಕ್ಕೆ ಆಸ್ಪತ್ರೆಗಳನ್ನು ನಡೆಸುವುದಕ್ಕೆ ಆಗುವುದಿಲ್ಲ. ಅಂಥ ಕಡೆಗಳಲ್ಲಿ ಯಾವುದಾದರೂ ಒಂದು organization ಅದನ್ನು ನಡೆಸಿಕೊಂಡು ಹೋಗುತ್ತೇವೆಂದು ಬಂದರೆ, ಅವರಿಗೆ ಕೊಡುವುದಕ್ಕೆ ನೀವು ಏಕೆ ತಯಾರಿಲ್ಲ? ನಾನು ಈ ಪ್ರಶ್ನೆಯನ್ನು ಕೇಳಿಲ್ಲ. ಆದರೂ ಒಂದು ಮಾತನ್ನು ಕೇಳಲಿಚ್ಛಿಸುತ್ತೇನೆ. ನೀವು ಇವತ್ತು ಬೇಕಾದಷ್ಟು x-ray machine ಗಳನ್ನು ತೆಗೆದುಕೊಂಡಿದ್ದೀರಿ, scanning machines ತೆಗೆದುಕೊಂಡಿದ್ದೀರಿ, CT scan, MRI ತೆಗೆದುಕೊಂಡಿದ್ದೀರಿ. ಅಲ್ಲಿ ಅವುಗಳನ್ನು operate ಮಾಡುವವರು ಇಲ್ಲ, ಮತ್ತೆ ಆ ಮಿಷನ್‌ಗಳು ಒಂದೆರಡು ವರ್ಷ, ಮೂರು ವರ್ಷಗಳಲ್ಲಿ ತುಕ್ಕು ಹಿಡಿಯತ್ತಿವೆ. ನೀವು ಯಾರಿಗಾದರೂ ಬೇರೆಯವರಿಗೆ ಕೊಟ್ಟು out source ಮಾಡಿ, ಬಡವರಿಗೆ free ಮಾಡಿ,

ಬೇರೆಯವರಿಗೆ charge ಮಾಡಿ, ಒಂದು scanningಗೆ ಇಷ್ಟು ಎಂದು charge ಮಾಡಿ, ಆಗ ಅದರ maintenance ಮಾಡಿದ ಹಾಗೆ ಆಗುತ್ತದೆ. ಮತ್ತೆ ಅವರು ನಡೆಸಿಕೊಂಡು ಹೋಗುತ್ತಾರೆ. ಇದರಿಂದ ನಿಮಗೆ burden ಕಡಿಮೆಯಾಗುತ್ತದೆ. ಅದಕ್ಕೆ ಸರ್ಕಾರ ಇದರ ಬಗ್ಗೆ ಚಿಂತನೆ ಮಾಡಬೇಕೆಂದು ಹೇಳಲಿಚ್ಛಿಸುತ್ತೇನೆ.

ಶ್ರೀ ಬಿ. ಶ್ರೀರಾಮುಲು: ವೈದ್ಯರು ಗ್ರಾಮೀಣ ಭಾಗದಲ್ಲಿ ಒಂದು ವರ್ಷ ಕೆಲಸ ಮಾಡಬೇಕು ಎಂದು ನಾನು ತಪ್ಪಾಗಿ ಹೇಳಿದ್ದೆ. ಆರು ವರ್ಷ ಕಡ್ಡಾಯವಾಗಿ ಮಾಡಬೇಕೆಂದು ರೂಲ್ಸ್ ಇದೆ. ಅವರು appointment ಆಗುವಾಗ ಗ್ರಾಮೀಣ ಮಟ್ಟದಲ್ಲಿ ಆಗುತ್ತಾರೆ, ಒಂದು ತಿಂಗಳು–ಮೂರು ತಿಂಗಳಾದ ನಂತರ ಅವರು ನಗರಗಳಿಗೆ transfer ಮಾಡಿಸಿಕೊಳ್ಳುತ್ತಾರೆ. ಎಂದು ತಾವೇನು ಹೇಳುತ್ತಿದ್ದೀರಿ, ಹಾಗೆ ಆಗುವುದಕ್ಕೆ ನಾವು ಅವಕಾಶ ಮಾಡಿಕೊಡುವುದಿಲ್ಲ. ಏಕೆಂದರೆ, ಅವರು ಆರು ವರ್ಷಗಳ ಕಾಲ ಗ್ರಾಮೀಣ ಪ್ರದೇಶಗಳಲ್ಲಿ ಕಡ್ಡಾಯವಾಗಿ ಕೆಲಸ ಮಾಡಲೇಬೇಕು. ಮೊನ್ನೆ ನಾನು ಒಂದು resolution ಕೂಡ pass ಮಾಡಿ, ಗ್ರಾಮೀಣ ಪ್ರದೇಶಗಳಲ್ಲಿ 6 ವರ್ಷಸೇವೆ ಸಲ್ಲಿಸಿದರೆ ಮಾತ್ರ ನಂತರ ನಿಮಗೆ ಬೇಕಾದ ಅವಕಾಶ ಮಾಡಿಕೊಡುತ್ತೇನೆ ಎಂದು ಹೇಳಿದ್ದೇನೆ. ಇಲಾಖೆಯಿಂದ ನಡೆಸಲು ಆಗದಿದ್ದರೆ ಖಾಸಗಿಯವರಿಗೆ ಅವಕಾಶ ಮಾಡಿಕೊಡಬಹುದು ಎನ್ನುವಂಥ ಮಾತನ್ನು ಹೇಳುತ್ತಿದ್ದರು. ಇದನ್ನು ಖಾಸಗಿಯವರಿಗೆ ಕೊಡಬಾರದು ಎನ್ನುವ ಉದ್ದೇಶವಿದೆ. 'ಆರೋಗ್ಯ ಬಂಧು' ಎನ್ನುವ ಯೋಜನೆ ಮುಂಚೆಯಿಂದಲೂ ಇಲಾಖೆಯಲ್ಲಿ ಕೆಲಸ ಮಾಡುತ್ತಿದೆ. ಮೊದಲು Medical Education Department ಮತ್ತು Health Department ಒಂದಾಗಿದ್ದವು. ಎಲ್ಲವನ್ನೂ ಒಟ್ಟಿಗೆ ನಡೆಸಿಕೊಂಡು ಹೋಗುತ್ತಿದ್ದೆವು. Bifurcation ಆಗಿ Health ಮತ್ತು Medical Education ಗಳು ಬೇರೆಯಾದವು. ಮೊದಲು

ನಮ್ಮ ವೈದ್ಯರೂ Medical Education ನಲ್ಲಿ ಕೆಲಸ ಮಾಡುತ್ತಿದ್ದರು, ಅಲ್ಲಿ ನಮ್ಮ staff ಇರುತ್ತಿದ್ದರು. ಆದರೆ maintenance ಅವರು ಮಾಡುತ್ತಿದ್ದರು. ಈಗ ಬಹಳಷ್ಟು ತೊಂದರೆಗಳಿವೆ ಎಂದು ಹೇಳಿದ್ದಾರೆ. ಇದನ್ನು ಸರಿಪಡಿಸಲು ಏನು ವ್ಯವಸ್ಥೆ ಮಾಡಬೇಕು ಎನ್ನುವುದನ್ನು ನೋಡಿ ಮುದ್ದೇಬಿಹಾಳ ಆಸ್ಪತ್ರೆಯಲ್ಲಿರುವ ವೈದ್ಯರು ಮತ್ತು ದಾದಿಯರ ಕೊರತೆಯನ್ನು ನೀಗಿಸಲು ಆದಷ್ಟು ಬೇಗ ನಾನು ವ್ಯವಸ್ಥೆಯನ್ನು ಮಾಡಿಕೊಡುತ್ತೇನೆ. 5,000 ಮಂದಿ paramedical staff ತೆಗೆದುಕೊಳ್ಳವ ಪ್ರಕ್ರಿಯೆ ಈಗಾಗಲೇ ಜಾರಿಯಲ್ಲಿದ್ದು, ಕೇವಲ ಅವರಿಗೆ appointment ಅನ್ನು ಮಾತ್ರ ಕೊಡಬೇಕಾಗಿದೆ. ಒಂದು ತಿಂಗಳೊಳಗೆ ಆದಷ್ಟು ಬೇಗನೆ ವ್ಯವಸ್ಥೆ ಮಾಡುತ್ತೇನೆ.

ಆರೋಗ್ಯ ಇಲಾಖೆಯಲ್ಲಿ 108 ಯೋಜನೆಯ ಬಗ್ಗೆ

129 (675) ಶ್ರೀ ಸಂಪಂಗಿ. ಎನ್ (ಬಾಗೇಪಲ್ಲಿ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) 108 ಯೋಜನೆಯಡಿಯಲ್ಲಿ ಅನುಷ್ಠಾನಕ್ಕಾಗಿ ಕೇಂದ್ರ ಸರ್ಕಾರದಿಂದ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ; ಈ ಪೈಕಿ ಇದುವರೆಗೆ ಎಷ್ಟು ವೆಚ್ಚವಾಗಿದೆ;

(ಆ) ರಾಜ್ಯ ಸರ್ಕಾರದಿಂದ ಈ ಯೋಜನೆಗಾಗಿ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ ಹಾಗೂ ಈ ಪೈಕಿ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ?

ಶ್ರೀ ಬಿ. ಶ್ರೀರಾಮುಲು (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):–

(ಅ) 108 ಯೋಜನೆಯಡಿಯಲ್ಲಿ 31–3–2010 ಅಂತ್ಯಕ್ಕೆ ಕೇಂದ್ರ ಸರ್ಕಾರದ ಎನ್ ಆರ್ ಹೆಚ್ ಎಂ ಯೋಜನೆಯಡಿಯಲ್ಲಿ ರೂ. 6.25